ಶ್ರೀ ಬಂಡೆಪ್ಪ ಕಾಶಂಪೂರ್: cleaning system ನಲ್ಲಿ ರೈತರಿಗೆ ಮೋಸವಾಗುತ್ತಿದೆ. ಅವರು ತಮ್ಮ ಹತ್ತಿರ clean ಮಾಡಿಕೊಂಡು ಬಂದು ಪುನ: market yard ನಲ್ಲಿ complete clean ಮಾಡುತ್ತಾರೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ಯಾವ ರೈತರೂ ಇವತ್ತಿನವರೆಗೂ ಅದರ ಬಗ್ಗೆ complaint ಕೊಟ್ಟಿಲ್ಲ. ಇವತ್ತು ಮಾನ್ಯ ಸದಸ್ಯರು ಆ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ನಾನು ಅಧಿಕಾರಿಗಳ ಜೊತೆ ಚರ್ಚಿಸಿ ಪರಿಶೀಲನೆ ಮಾಡುತ್ತೇನೆ.

ಹಾಲು ಉತ್ಪಾದಕ ಸಹಕಾರ ಒಕ್ಕೂಟಗಳ ಲಾಭ/ನಷ್ಟದ ಬಗ್ಗೆ

12(155) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು)

ಅ) ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆ.ಎಂ.ಎಫ್) ಅಧೀನದಲ್ಲಿ ಬರುವ ಜಿಲ್ಲಾ ಹಾಲು ಒಕ್ಕೂಟಗಳು ಪಶು ಆಹಾರ ತಯಾರಿಕಾ ಮತ್ತು ಇತರ ಘಟಕಗಳು ಯಾವುವು? (ಪೂರ್ಣ ವಿವರ ಒದಗಿಸುವುದು)

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ, ಬೆಂಗಳೂರು ಇದರ ಅಧೀನದಲ್ಲಿ ಒಟ್ಟು 13 ಜಿಲ್ಲಾ ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳವು 4 ಪಶು ಆಹಾರ ಘಟಕಗಳನ್ನು ಹಾಗೂ 6 ಇತರೆ ಘಟಕಗಳನ್ನು ಹೊಂದಿದೆ.

ಆ) ಕೆ.ಎಂ.ಎಫ್. ಮತ್ತು ವಿವಿಧ ಹಾಲು ಒಕ್ಕೂಟಗಳು (ಪ್ರಾಡಕ್ಟ್ ಡೈರಿ ಹಾಗೂ ಇತರ ಘಟಕಗಳು ಸೇರಿದಂತೆ) ಕಳೆದ ಮೂರು ವರ್ಷಗಳಿಂದ ಗಳಿಸಿರುವ ಲಾಭ ಅಥವಾ ಅನುಭವಿಸಿರುವ ನಷ್ಟದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

ಕೆ.ಎಂ.ಎಫ್ ಮತ್ತು ವಿವಿಧ ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ಗಳಿಸಿರುವ ಲಾಭ, ಅಥವಾ ಅನುಭವಿಸಿರುವ ನಷ್ಟದ ಮೊತ್ತವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕೆ.ಎಂ.ಎಫ್. ಸೇರಿದಂತೆ ಯಾವ ಯಾವ ಒಕ್ಕೂಟಗಳು ಮತ್ತು ಪ್ರಾಡೆಕ್ಟ್ ಡೈರಿಗಳ ಮೇಲೆ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನೆಯ ತಪಾಸಣೆ ನಡೆಸುತ್ತಿರುವುದು ನಿಜವೇ? ಹಾಗಿದ್ದಲ್ಲಿ, ಈ ದೂರುಗಳ ವಿವರಗಳೇನು? ಇದರಿಂದ ಆಗಿರುವ ನಿಯಮಗಳ ಉಲ್ಲಂಘನೆಯ ವಿವರಗಳೇನು?

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ., (ಕೆಎಂಎಫ್) ಬೆಂಗಳೂರು ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದಲ್ಲಿರುವ ಹಾಲು ಉತ್ಪನ್ನಗಳ ಘಟಕದ ಸಿಬ್ಬಂದಿಗಳ ನೇಮಕಾತಿ ವಿಷಯದ ಬಗ್ಗೆ ದೂರುಗಳು ಬಂದಿರುತ್ತವೆ. ಈ ದೂರುಗಳಲ್ಲಿನ ಅಂಶಗಳ ಬಗ್ಗೆ ಸಹಕಾರ ಸಂಘಗಳ ನಿಬಂಧಕರಿಂದ ಪೂರ್ವಭಾವಿಯಾಗಿ ವಿಚಾರಣೆ ನಡೆಸಿ, ಅವರ ಅಭಿಪ್ರಾಯದ ಮೇರೆಗೆ ಕರ್ನಾಟಕ ಸಹಕಾರಿ ಹಾಲು ಉತ್ಪಾಧಕರ ಮಹಾಮಂಡಳ ನಿ, ಬೆಂಗಳೂರು ಇದರ 2001–02 ನೇ ಸಾಲಿನಿಂದ 2007–08ನೇ ಸಾಲಿನವರೆಗಿನ ಲೆಕ್ಕಪತ್ರಗಳ ಮರುಪರಿಶೀಲನೆಯ ಅಗತ್ಯತೆಯನ್ನು ಮನಗಂಡು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ದಿನಾಂಕ: 05.11.2008 ರಂದು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 63(11) ರಡಿ ಮರುಪರಿಶೀಲನೆಗೆ ಆದೇಶಿಸಿದ್ದಾರೆ.

ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಇಲ್ಲದ, ಸಾಮಾನ್ಯ ವಿಜ್ಞಾನ ಪದವಿ ಹೊಂದಿದ ಶ್ರೀ ಐ.ಆರ್.ರಾಮಲಿಂಗೇಗೌಡ ಇವರನ್ನು ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನೇಮಿಸಿರುವುದು, ಇವರಿಂದ ಮಹಾಮಂಡಳದಲ್ಲಿ ಹಲವು ರೀತಿಯ ದುಂದು ವೆಚ್ಚವಾಗಿರುವುದು, ಹಾಲು ಉತ್ಪನ್ನಗಳನ್ನು ಅವೈಜ್ಞಾನಿಕ ರೀತಿಯಲ್ಲಿ ಮಾರಾಟ ಮಾಡುತ್ತಿರುವುದು ಹಾಗೂ ಮಂಡಳಿಯ ಸಿಬ್ಬಂದಿ ನೇಮಕಾತಿಯಲ್ಲಿ ನಿಯಮಗಳ ಉಲ್ಲಂಘನೆ ಮಾಡಿರುವುದು ಮುಂತಾದ ಅಪಾದನೆಗಳನ್ನು ಅರ್ಜಿಗಳಲ್ಲಿ ಮಾಡಲಾಗಿರುತ್ತದೆ.

ಮರುಪರಿಶೀಲನಾ ವರದಿ ಇನ್ನೂ ಸಲ್ಲಿಕೆಯಾಗದೆ ಇರುವುದರಿಂದ ನಿಯಮಗಳ ಉಲ್ಲಂಘನೆಯ ವಿವರಗಳು ಲಭ್ಯವಿರುವುದಿಲ್ಲ.

ಈ) ಈ ತಪಾಸಣೆ ಎಂದಿನಿಂದ ಪ್ರಾರಂಭವಾಯಿತು ಮತ್ತು ಈ ಯಾವ ಹಂತದಲ್ಲಿದೆ? ಯಾವಾಗ ಈ ತಪಾಸಣಾ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಗುವುದು?

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ, ಬೆಂಗಳೂರು ಇದರ ಮರುಪರಿಶೀಲನಾ ಕಾರ್ಯವನ್ನು ದಿನಾಂಕ:06.11.2008ರಿಂದ ಪ್ರಾರಂಭಿಸಲಾಗಿರುತ್ತದೆ.

ಮರುಪರಿಶೀಲನಾ ಸಂದರ್ಭದಲ್ಲಿ ಮರುಪರಿಶೀಲನಾ ಅಧಿಕಾರಿಗಳು ಗಮನಿಸಿರುವ ನ್ಯೂನತೆಗಳ ಸಂಬಂಧ ಸಂಸ್ಥೆಯ ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಸಿ ವಿವರಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಬಗ್ಗೆ ಅತೃಪ್ತಗೊಂಡ ಸಂಸ್ಥೆಯು ಗೌರವ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ಸಂಬಂಧ ರಿಟ್ ಅರ್ಜಿ ಸಂಖ್ಯೆ 14136/2009ನ್ನು ದಾಖಲಿಸಿದ್ದು, ಗೌರವ ಉಚ್ಚ ನ್ಯಾಯಾಲಯವು ಪ್ರಕರಣವನ್ನು ಅಲಿಸಿ ಸಮಜಾಯಿಷಿ/ವಿವರಣೆ ನೀಡಲು ದಿನಾಂಕ:17.07.2009 ರವರೆಗೆ ಗಡುವು ನೀಡಿರುತ್ತದೆ.

ಗೌರವ ಉಚ್ಚ ನ್ಯಾಯಾಲಯ ನೀಡಿರುವ ದಿನಾಂಕ:17.07.2009 ರ ಗಡುವು ಮುಗಿದ ನಂತರ ಮರುಪರಿಶೀಲನಾ ಕಾರ್ಯವನ್ನು ಮುಕ್ತಾಯಗೊಳಿಸಲಾಗುವುದು.

ಅನುಬಂಧ

ಕರ್ನಾಟಕ ಹಾಲು ಮಹಾಮಂಡಳಿ ಹಾಗೂ ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ಗಳಿಸಿರುವ ಲಾಭ/ನಷ್ಟದ ಬಗ್ಗೆ ಸಂಕ್ಷಿಪ್ತ ವಿವರ

(ರೂ. ಲಕ್ಷಗಳಲ್ಲಿ)

		2005–06	2006–07	2007–08	2008–09 (ತಾತ್ಕಾಲಿಕ)
1.	ಬೆಂಗಳೂರು ಹಾಲು ಒಕ್ಕೂಟ	357.31	327.48	343.80	159.38
2.	ಕೋಲಾರ ಹಾಲು ಒಕ್ಕೂಟ	382.77	47.07	109.78	221.60
3.	ಮೈಸೂರು ಚಾಮರಾಜನಗರ ಹಾಲು ಒಕ್ಕೂಟ	–0.30 (ನಷ್ಟ)	86.72	201.81	286.44
4.	ಮಂಡ್ಯ ಹಾಲು ಒಕ್ಕೂಟ	60.06	47.30	17.39	264.98
5.	ಧಾರವಾಡ ಹಾಲು ಒಕ್ಕೂ	–16.85 (ನಷ್ಟ)	15.12	203.66	68.69
6.	ಬೆಳಗಾವಿ ಹಾಲು ಒಕ್ಕೂಟ	49.51	2.81	–8.57 (ನಷ್ಟ)	51.30

7.	ಹಾಸನ ಹಾಲು ಒಕ್ಕೂಟ	61.55	61.40	199.57	185.28
8.	ತುಮಕೂರು ಹಾಲು ಒಕ್ಕೂಟ	29.53	168.39	104.26	170.75
9.	ದಕ್ಷಿಣ ಕನ್ನಡ ಹಾಲು ಒಕ್ಕೂಟ	49.74	34.96	72.78	108.00
10.	ಶಿವಮೊಗ್ಗ ಹಾಲು ಒಕ್ಕೂಟ	27.07	15.01	21.70	83.57
11.	ಗುಲ್ಬರ್ಗಾ ಬೀದರ್ ಹಾಲು ಒಕ್ಕೂಟ	7.39	1.14	1.09	–58.10 (ನಷ್ಟ)
12.	ಬಿಜಾಪುರ ಬಾಗಲಕೋಟೆ ಹಾಲು ಒಕ್ಕೂಟ	42.81	20.82	80.77	87.77
13.	ರಾಯಚೂರು ಬಳ್ಳಾರಿ ಹಾಗೂ ಕೊಪ್ಪಳ ಹಾಲು ಒಕ್ಕೂಟ	26.73	72.46	52.29	114.34
14.	ಕರ್ನಾಟಕ ಹಾಲು ಮಹಾಮಂಡಳಿ ಹಾಗೂ ಘಟಕಗಳು	561.80	745.16	1111.45	1179.88

ಶ್ರೀ ಈಶ್ವರ ಭೀಮಣ್ಣ ಖಂಡ್ರೆ:– ಗುಲ್ಬರ್ಗಾ ಬೀದರ್ ಹಾಲು ಒಕ್ಕೂಟವನ್ನು ಪ್ರತ್ಯೇಕವಾಗಿ ಬೀದರ್‌ನಲ್ಲಿ ಮಾಡಿ, ಏಕೆಂದರೆ ಬೀದರ್‌ನಲ್ಲಿ ಹಾಲು ಉತ್ಪಾದನೆ ಜಾಸ್ತಿಯಾಗುತ್ತದೆಂದು ಬಹಳ ದಿವಸಗಳಿಂದ ಬೇಡಿಕೆಯಿದ್ದರೂ ಇಲ್ಲಿಯವರೆವಿಗೂ ಬೀದರ್‌ನಲ್ಲಿ ಪ್ರತ್ಯೇಕವಾದ ಹಾಲು ಒಕ್ಕೂಟ ಪ್ರಾರಂಭಿಸಿಲ್ಲ. ಸರ್ಕಾರ ಇದನ್ನು ಪ್ರಾರಂಭಿಸುತ್ತದೆಯೆ? ಇದರ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕು. ಜೊತೆಗೆ ನಿನ್ನೆ ನನಗೆ ಗುಲ್ಬರ್ಗಾ ಬೀದರ್ ಹಾಲು ಒಕ್ಕೂಟವನ್ನು ಸೂಪರ್‌ಸೀಡ್ ಮಾಡಿದ್ದಾರೆಂದು ಪತ್ರಿಕೆಗಳಿಂದ ಗೊತ್ತಾಯಿತು. ಒಂದು ಕಡೆ ವೈದ್ಯನಾಥನ್ ಕಮಿಟಿ ರಿಪೋರ್ಟ್‌ನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಾರೆ. ಜೊತೆಗೆ ನಿನ್ನೆ ಇದನ್ನು ಸೂಪರ್‌ಸೀಡ್ ಮಾಡಿರುವುದು ಏಕೆ ಎಂದು ಉತ್ತರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಗೌರವಾನ್ವಿತ ಸದಸ್ಯರು ಬೀದರ್ ಮತ್ತು ಗುಲ್ಬರ್ಗಾದಲ್ಲಿರುವ ಹಾಲು ಒಕ್ಕೂಟವನ್ನು ಬೇರ್ಪಡಿಸಬೇಕೆನ್ನುವ ಬೇಡಿಕೆಯನ್ನು ಇಟ್ಟಿದ್ದಾರೆ. ಬಹುಶ: ಈಗಾಗಲೇ ಬೀದರ್ ಮತ್ತು ಗುಲ್ಬರ್ಗಾದಲ್ಲಿರುವ ಹಾಲು ಒಕ್ಕೂಟ ಈ ವರ್ಷ ನಷ್ಟದಲ್ಲಿರತಕ್ಕಂಥ ಸಂದರ್ಭ ನೋಡಿದಾಗ ಸಧ್ಯಕ್ಕೆ ಬೇರ್ಪಡಿಸುವಂಥದ್ದು ಸದ್ಯದ ಪರಿಸ್ಥಿತಿಯಲ್ಲಿ ಸೂಕ್ತವಲ್ಲ. ಮುಂದಿನ

ದಿನಮಾನಗಳಲ್ಲಿ ಲಾಭದಾಯಕವಾಗಿದ್ದಂಥ ಸಂದರ್ಭದಲ್ಲಿ ಅದನ್ನು ಬೇರ್ಪಡಿಸಲಿಕ್ಕೆ ಸರಕಾರ ಚಿಂತನೆ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಅವರು ಇನ್ನೊಂದು ಪ್ರಶ್ನೆ ಕೇಳಿದರು. ಆ ಸಂಸ್ಥೆ ನಿನ್ನೆ ದಿವಸ ಸೂಪರ್‌ಸೀಡ್ ಆಗಿರುವ ಬಗ್ಗೆ ಕೇಳಿದರು. ವೈದ್ಯನಾಥನ್ ಕಮಿಟಿಯ ವರದಿಯ ಆಧಾರ ಇಟ್ಟುಕೊಂಡು ಸೂಪರ್‌ಸೀಡ್ ಮಾಡಿರುವುದು ಸರಿಯಲ್ಲವೆಂದು ಅವರ ಅಭಿಪ್ರಾಯ. ವೈದ್ಯನಾಥನ್ ಕಮಿಟಿಯ ವರದಿಗೆ ಮತ್ತು ಈ ಹಾಲು ಒಕ್ಕೂಟಗಳಿಗೆ ಯಾವುದೇ ತರಹದ ಸಂಬಂಧವಿಲ್ಲ. ಈ ಒಂದು ಹಿನ್ನೆಲೆಯಲ್ಲಿ ಈ ಪ್ರಶ್ನೋತ್ತರ ಮುಗಿದ ಬಳಿಕ ಸೂಪರ್‌ಸೀಡ್ ಆಗಿರುವ ಬಗ್ಗೆ ನಾನು ಮಾಹಿತಿ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಸೂಪರ್‌ಸೀಡ್ ಆಗಿರುವ ಬಗ್ಗೆ ನಂತರ ಉತ್ತರ ಕೊಡಿ. ಈ ಪ್ರಶ್ನೆಗೆ ಅದು ಸಂಬಂಧವಿಲ್ಲ. ಅವರು ಮೊದಲು ಉತ್ತರ ಮುಗಿಸಿದ ನಂತರ ನೀವು ಪ್ರಶ್ನೆ ಕೇಳಿ. ನಿಮ್ಮದು ಉತ್ತರ ಮುಗಿಯತೆ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನಾನು ಈಗಾಗಲೇ ಉತ್ತರಿಸಿದ್ದೇನೆ. ಆ ಬಗ್ಗೆ ನಂತರ ಉತ್ತರ ಕೊಡುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್: ಬೀದರ್‌ನಲ್ಲಿ ಹಾಲು ಒಕ್ಕೂಟ ಏಕೆ ಮಾಡಬಾರದು ಎನ್ನುವುದಕ್ಕೆ ಸನ್ಮಾನ್ಯ ಸಚಿವರು ಉತ್ತರ ಕೊಟ್ಟರು. ಏನೆಂದರೆ, ಈಗ ನಷ್ಟ ಇದೆ, ಲಾಭ ಬಂದ ನಂತರ ಬೀದರ್‌ನಲ್ಲಿ ಮಾಡುತ್ತೇವೆಂದು ಹೇಳಿದರು. ಆದರೆ, ನಾನು ತಮ್ಮ ಮುಖಾಂತರ ಏನು ಹೇಳಬಯಸುತ್ತೇನೆಂದರೆ, ನಿನ್ನೆ ಏನು ಸೂಪರ್‌ಸೀಡ್ ಮಾಡಿದ್ದಾರೆ, ಬೀದರ್‌ಗೆ ಶಿಫ್ಟ್ ಮಾಡಿದ್ದಾರೆಂದು ಮಾಡಿದ್ದಾರೆ. ಇವತ್ತು ಇವರೇ ಬೀದರ್‌ಗೆ ಮಾಡಲಿಕ್ಕೆ ಆಗುವುದಿಲ್ಲ. ಲಾಭವಾದ ನಂತರ ಮಾಡುತ್ತೇವೆಂದು ಹೇಳುತ್ತಾರೆ. ಅದೇ ಒಂದು ಕಾರಣದಿಂದ ಸೂಪರ್‌ಸೀಡ್ ಮಾಡಿದ್ದಾರೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಸದಸ್ಯರು ನನ್ನ ಉತ್ತರವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾನು ಏನು ಹೇಳಿದೆ ಎಂದರೆ, ಈಗ ನಷ್ಟದಲ್ಲಿದೆ ಮುಂದೆ ಲಾಭವಾದಾಗ ಪರಿಶೀಲಿಸಬಹುದು ಎಂದು ಹೇಳಿದೆ.

ಶ್ರೀ ಬಂಡೆಪ್ಪ ಕಾಶಂಪೂರ್: ಅದರಲ್ಲಿಯೇ ಇದೆ. ಬೀದರ್‌ಗೆ ಆಫೀಸ್ ಶಿಫ್ಟ್ ಮಾಡಿರುವುದರಿಂದ ನಾವು ಇದನ್ನು ಮಾಡುತ್ತೇವೆಂದು ಇದೆ. ಶಿಫ್ಟ್ ಆಗಿಲ್ಲವೇ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಸದಸ್ಯರು ನನ್ನ ಉತ್ತರವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾನು ಏನು ಹೇಳಿದೆ ಎಂದರೆ, ಈಗ ನಷ್ಟದಲ್ಲಿದೆ ಮುಂದೆ ಲಾಭವಾದಾಗ ಪರಿಶೀಲಿಸಬಹುದು ಎಂದು ಹೇಳಿದೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ: ಬೀದರ್‌ಗೆ ಪ್ರತ್ಯೇಕವಾದ ಹಾಲು ಒಕ್ಕೂಟ ಮಾಡಿದರೆ ಲಾಭ ಆಗೇ ಆಗುತ್ತದೆ. ಆದರೆ, ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತದೆ. ಇದು ಬಹಳ ದಿವಸಗಳಿಂದ ಬೇಡಿಕೆಯಿದ್ದರೂ ಇದನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ಅದಕ್ಕಾಗಿ ಮಾನ್ಯ ಸಚಿವರು ತಕ್ಷಣವೇ ಇದನ್ನು ಬೇರ್ಪಡೆ ಮಾಡುತ್ತೇವೆಂದು ಅಲ್ಲಿ ಆಶ್ವಾಸನೆ ಕೊಡಬೇಕೆಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಗುಲ್ಬರ್ಗಾ ಮತ್ತು ಬೀದರ್ ಎರಡು ಜಿಲ್ಲೆಗಳಿಗೂ ಒಂದೇ ಹಾಲು ಒಕ್ಕೂಟ ಇರುವುದು. ನಿಮ್ಮ ಉತ್ತರ ಏನು ಇದೆ ಎಂದರೆ, ಬೈಫರ್‌ಕೇಟ್ ಮಾಡಿದರೆ ಈಗಾಗಲೇ ನಷ್ಟದಲ್ಲಿದೆ ಇನ್ನೂ ನಷ್ಟ ಹೆಚ್ಚಾಗಿ ಬಿಡುತ್ತದೆ, ಅದಕ್ಕೋಸ್ಕರ ಅದು ಲಾಭಕ್ಕೆ ಬಂದಾಗ ಅದನ್ನು ಡಿವಿಜನ್ ಮಾಡಿ ಆ ಜಿಲ್ಲೆಗೂ ಬೈಫರ್‌ಕೇಟ್ ಮಾಡುತ್ತೇವೆ ಎನ್ನುವುದು ನಿಮ್ಮ ವಾದ. ಆದರೆ ನನ್ನ ಪ್ರಕಾರ, ನಾನು ಕೂಡ ಸ್ವಲ್ಪ ದಿವಸ ಪಶುಸಂಗೋಪನಾ ಇಲಾಖೆಯ ಸಚಿವನಾಗಿ ಕೆಲಸ ಮಾಡಿದ್ದಾನೆ. ಆವೋತ್ತಿನ ದಿವಸಗಳಿಂದಲೂ ಬೀದರ್ ಜಿಲ್ಲೆಯವರದು ನಮಗೆ ಪ್ರತ್ಯೇಕವಾದ ಯೂನಿಯನ್ ಬೇಕು, ಪ್ರತ್ಯೇಕವಾದ ಹಾಲು ಸಂಸ್ಕರಣೆ ಮಾಡುವ ಡೈರಿ ಬೇಕು ಎಂದು ಬಹಳ ಒತ್ತಾಯವಿದೆ. ಮಿಲ್ಕ್ ರೂಟ್‌ಗಳು ಬಹಳ ದೂರ ಇವೆ. ದೂರದಿಂದ ಹಾಲು ಸಾಗಾಣಿಕೆ ಮಾಡಿಕೊಂಡು ಬರಬೇಕಾದರೆ ಟ್ರಾನ್ಸ್‌ಪೋರ್ಟ್ ಕಾಸ್ಟ್ ಜಾಸ್ತಿಯಾಗುತ್ತದೆ ಮತ್ತು ಹೆಚ್ಚು ಹಾಲು ಉತ್ಪಾದನೆಯಾಗುವುದು ಬೀದರ್‌ನಲ್ಲಿ. ಬೀದರ್‌ನಲ್ಲಿ ಹೆಚ್ಚು ಹಾಲು ಉತ್ಪಾದನೆ ಮಾಡಿಕೊಂಡು ನೀವು ಸಂಸ್ಕರಣಾ ಘಟಕವನ್ನು ಡೈರಿಯನ್ನು ಗುಲ್ಬರ್ಗಾದಲ್ಲಿ ಇಟ್ಟುಕೊಂಡು ಲಾಭ ಮಾಡಬೇಕೆಂದು ನೀವು ವಿಚಾರ ಮಾಡಿದರೆ ಲಾಭ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕೋಸ್ಕರ ಡೈರಿ ಬೀದರ್‌ನಲ್ಲಿರಬೇಕು. ಯೂನಿಯನ್ ಕೂಡ ಅಲ್ಲಿಯೇ ಇರಬೇಕು. ಹಾಗಿದ್ದಾಗ ಮಾತ್ರ ಲಾಭ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿಮ್ಮ ಉತ್ತರ other way round ಇದೆ. ಯಾವ ಕಾರಣಕ್ಕೂ ಕೂಡ ಲಾಭ ಬರುವುದಿಲ್ಲ. ಬೈಫರ್‌ಕೇಟ್ ಮಾಡಲಿಕ್ಕೆ ಆಗುವುದಿಲ್ಲ. ಲಾಭ ನಷ್ಟ ನೀವು ಈಗ ನೋಡದೇ ಬೈಫರ್‌ಕೇಟ್ ಮಾಡಿ ಈಗ ಲಾಭ ಬಂದೇ ಬರುತ್ತದೆ. ಗುಲ್ಬರ್ಗಾದಲ್ಲೂ ಲಾಭ ಬರುತ್ತದೆ. ಆಗ ಅದು ವಯಬಲ್ ಆಗುತ್ತದೆ. ಈಗ ವಯಬಲ್ ಆಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ನೀವು ಅಧಿಕಾರಿಗಳಿಗೆ ಜೊತೆಗೆ ಚರ್ಚಿಸಿ ಅದಕ್ಕೆ ಸೆಪರೇಟಾದ ಯೂನಿಯನ್ನ ಮಾಡಿ, ಸೆಪರೇಟಾದ ಸಂಸ್ಕರಣಾ ಘಟಕ ಮಾಡಿದರೆ ಲಾಭವಾಗುತ್ತದೆ ಮತ್ತು ಇದರಿಂದಾ ಹಾಲು ಉತ್ಪಾದನಾ ಹೆಚ್ಚಾಗಿ ರೈತರಿಗೂ ಅನುಕೂಲವಾಗುತ್ತದೆ. ಹೀಗಾಗಿ ತಾವು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಪರಿಶೀಲಿಸುತ್ತೇನೆ.